| |
|---|
| ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ , ಕುಣಿಗಲ್ |

ಸಿ.ಸಿ.849/2018

ಚಾಸಾ-2 ಪ್ರಾಸಾ-2

ಸಾಕ್ಷಿದಾರರ ಹೆಸರು : ಸದಾಶಿವಯ್ಯ
ತಂದೆಯ ಹೆಸರು : ಲೇಟ್ ರುದ್ರಪ್ಪ
ವಯಸ್ಸು : 62 ವರ್ಷ
ಉದ್ಯೋಗ : ಎ.ಎಸ್.ಐ., ಕುಣಿಗಲ್ ಠಾಣೆ
ವಾಸ : ಕುಣಿಗಲ್

ಸಾಕ್ಷಿಯನ್ನು ದಿನಾಂಕ:12.03.2021ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ :- ಮಾನ್ಯ ಸ.ಸ.ಅ ರವರಿಂದ.

ನಾನು ಜೂನ್ 10 ರಿಂದ ಅಕ್ಟೋಬರ್ 2013ರವರೆಗೆ ಮುಖ್ಯ ಪೇದೆಯಾಗಿ ಮತ್ತು ತದ ನಂತರ ಆಗಸ್ಟ್ 2018ರವರೆಗೆ ಕುಣಿಗಲ್ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕಾರ್ಯ ನಿರ್ವಹಿಸಿದ್ದೇನೆ.

ದಿ.05/05/2018 ರಂದು ನಾನು ಮತ್ತು ಚಾಸಾ 3ರವರಿಗೆ ಕುಣಿಗಲ್ ವಿಧಾನ ಸಭಾ ಚುನಾವಣಾ ಪ್ರಯುಕ್ತ ಪ್ಲೆಯಿಂಗ್ ಸ್ಕ್ವಾಡ್‌ನ ಸದಸ್ಯರಾಗಿ ಚುನಾವಣಾ ಅಕ್ರಮ ತಡೆಯಲು ಚಾಸಾ 1 ರವರ ಜೊತೆ ನಿಯೋಜಿಸಲಾಗಿತ್ತು. ಚಾಸಾ 1 ರವರು ತಮ್ಮ ಇಲಾಖಾ ವಾಹನದಲ್ಲಿ ಕುಣಿಗಲ್‌ನ ಮಲ್ಲಾಘಟ್ಟದ ಲಕ್ಷ್ಮಣರವರ ಕೊಟ್ಟಿಗೆ ಬಳಿ ನಮ್ಮನ್ನು ಹಾಗೂ ಚಾಸಾ 6 ಮತ್ತು 7 ರವರನ್ನು ಕರೆದುಕೊಂಡು ಹೋಗಿ, ಸದರಿ ಕೊಟ್ಟಿಗೆಯಲ್ಲಿ ಚುನಾವಣಾ ಅಕ್ರಮ ಎಸಗಲು ಸೀರೆಗಳನ್ನು ಬಚ್ಚಿಟ್ಟಿದ್ದಾರೆಂದು ಕೊಟ್ಟಿಗೆ ಒಳಗೆ ಹೋಗಿ ಪರಿಶೀಲಿಸಿದಾಗ ಜೋಳದ ಮೇವನ್ನು ಹೊದಸಿ ಕೆಳಗೆ ಎರಡು ದೊಡ್ಡ ರಟ್ಟಿನ ಬಾಕ್ಸ್‌ಗಳು ಇದ್ದವು ಅವುಗಳನ್ನು ಪರಿಶೀಲಿಸಿದಾಗ ಸುಮಾರು 128 ಸೀರೆಗಳು ಇದ್ದವು. ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮಾಡಿ ವಶಕ್ಕೆ ಪಡೆಯಲಾಗಿರುತ್ತದೆ. ಸದರಿ ಸೀರೆಗಳನ್ನು ನಾನು ನ್ಯಾಯಾಲಯದ ಮುಂದೆ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು. ಮಾ1 ಮತ್ತು 2 ಎಂದು ಗುರುತಿಸಲಾಗಿದೆ. ಪಂಚನಾಮೆಗೆ ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ಸಾಕ್ಷಿ ಗುರುತಿಸಿದ್ದು

ಅದನ್ನು ನಿಪಿ-2ಬಿ ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಆರೋಪಿತರು ಸಹ ಹಾಜರಿದ್ದರು.

**<u>ಪಾಟೀ ಸವಾಲು ಃ ಆರೋಪಿತರ ಶ್ರೀ ಎನ್.ಆರ್.ಆರ್. ವಕೀಲರಿಂದ</u>**

ನಾವು ಸ್ಥಳಕ್ಕೆ ಹೋದಾಗ ಸದರಿ ಕೊಟ್ಟಿಗೆ ಯಾರ ಮಾಲೀಕತ್ವಕ್ಕೆ ಸೇರಿತ್ತೆಂದು ನಾನು ವಿಚಾರಣೆ ಮಾಡಿಲ್ಲ. ನಂತರದಲ್ಲಿ ಸಹ ಸಂಬಂಧಪಟ್ಟ ಅಧಿಕಾರಿಗಳಿಂದ ಕೊಟ್ಟಿಗೆ ಬಗ್ಗೆ ದಾಖಲೆ ಪರಿಶೀಲಿಸಿಲ್ಲ. ಮು.ಮಾ1 ಮತ್ತು 2 ರ ಮೇಲೆ ಸ್ಥಳದಲ್ಲಿ ಯಾವುದೇ ವಿಶೇಷ ಗುರುತು ಹಾಕಿರುವುದಿಲ್ಲ. ಚಾಸಾ 1 ವರವ ಮಾತು ಕೇಳಿ ನಿಪಿ-2ನ್ನು ಠಾಣೆಯಲ್ಲಿಯೇ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸೀರೆಗಳು ದೊರೆತಿವೆ ಎಂದು ಹೇಳಲಾದ ಸ್ಥಳಕ್ಕೂ, ಸೀರೆಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಮಾಡಿಸಲಾಯಿತು)
ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ
ಕುಣಿಗಲ್

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಣಿಗಲ್**

ಸಿ.ಸಿ. 1066/2011

ಚಾ ಸಾ-6 ಪ್ರಾಸಾ-7

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಾಘವೇಂದ್ರ |
| ತಂದೆಯ ಹೆಸರು | ಃ | ಹನುಮಂತಯ್ಯ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸ | ಃ | ದಾಸನಪುರ, ಕುಣಿಗಲ್ ತಾಲ್ಲೂಕು. |

ಸಾಕ್ಷಿಯನ್ನು ದಿನಾಂಕ 23.07.2016ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ

ಸಾಕ್ಷಿಗೆ ನಿಪಿ-3ನ್ನು ತೋರಿಸಲಾಗಿ ಅದರಲ್ಲಿರವ ತಮ್ಮ ಸಹಿ ಗುರ್ತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 3 ವರ್ಷಗಳ ಹಿಂದೆ ನಾನು ಲಾರಿ ತೆಗೆದುಕೊಂಡು ನಮ್ಮ ಊರಿನ ಮಾರಮ್ಮ ದೇವಸ್ಥಾನದ ಹಿಂಭಾಗ ಹೋಗುತ್ತಿದ್ದಾಗ ಪೊಲೀಸರು ಮಹಜರ್ ಸಂಬಂಧ ಸಹಿ ಮಾಡು ಅಂದರು ಸಹಿ ಮಾಡಿದ್ದೇನೆ , ಪೊಲೀಸರು ಆ ದಿನ ಎರಡು ಕಡ್ಡಿ ತೆಗೆದುಕೊಂಡು ಹೋಗಿದ್ದಾರೆ. ಅವು ಉದ್ದ ದಪ್ಪ ಇದ್ದವು. ನಿಪಿ-3ರ ಸಂಗತಿಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ. ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು).

ಪಾಟೀ ಸವಾಲು ಃ – ಮಾನ್ಯ ಸ.ಸ.ಅ ರವರಿಂದ

ಮಹಜರನ್ನು ದಿ.29-8-11 ರಂದು ತಿಮ್ಮಮ್ಮ ಅವರ ಜಮೀನು ಹತ್ತಿರ ಜರುಗಿಸಿದ್ದಾರೆ ಅಂರದೆ ಸರಿಯಲ್ಲ. ಗಲಾಟೆ ಸಂಬಂಧ ಪೊಲಿಸೇರು ಘಟನಾ ಸ್ಥಳಕ್ಕೆ ಬಂದು ಮಹಜರ್ ಮಾಡಿದ್ದಾರೆ ಅಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿರಲಿಲ್ಲ. ನನಗೆ ನಿಪಿ-3ರ ಸಂಗತಿಗಳು ಎಲ್ಲಾ ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮಹಜರನ್ನು ಬೆಳಿಗ್ಗೆ 9 ರಿಂದ 9-30ರ ಸಮಯದಲ್ಲಿ ಜರುಗಿಸಿದ್ದಾರೆ ಅಂದರೆ ಸರಿಯಲ್ಲ. ಪೊಲೀಸರು ಎರಡು ದೊಣ್ಣೆಗಳನ್ನು ತೆಗೆದುಕೊಂಡು ಹೋಗಿದ್ದರುಎ ಆದರೆ ನಾನು ಕಡ್ಡಿ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸೇವಾಲು ಃ 2 , 4 ಮತ್ತು 5ನೇ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲಾ ಎಂದು ಹೇಳಿರುತ್ತಾರೆ.

1 ಮತ್ತು 3ನೇ ಆರೋಪಿತರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು , ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ
ಕುಣಿಗಲ್